# ಕರ್ನಾಟಕ ಸರ್ಕಾರ

ಸಂಖ್ಯೆ: ಇಎನ್ 314 ವಿಎಸ್‌ಸಿ 2018 ಕರ್ನಾಟಕ ಸರ್ಕಾರದ ಸಚಿವಾಲಯ

ಬೆಂಗಳೂರು, ದಿನಾಂಕ:17-12-2018

## ಅಧಿಸೂಚನೆ

ವಿಷಯ: ಕೊಪ್ಪಳ ಜಿಲ್ಲೆ, ಕೊಪ್ಪಳ ತಾಲ್ಲೂಕು, ಕೇರೆಹಳ್ಳಿ ಗ್ರಾಮದಲ್ಲಿ 20 ಮೆ.ವ್ಯಾ ಸಾಮರ್ಥ್ಯದ ಸೌರ ವಿದ್ಯುತ್ ಘಟಕ ಸ್ಥಾಪಿಸುವ ಬಗ್ಗೆ.

ಉಲ್ಲೇಖ: ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಲ್‌ರವರ ಮನವಿ ಪತ್ರ ಸಂಖ್ಯೆ:ಕೆ.ಆರ್.ಇ.ಡಿ/01/ ಆಡಳಿತ-599/2018/7972-73 ದಿನಾಂಕ:05/06.12.2018.

********

ಸೌರ ವಿದ್ಯುತ್‌ನ್ನು ಪ್ರೋತ್ಸಾಹಿಸಲು ಸರ್ಕಾರವು ಅಧಿಸೂಚನೆ ಸಂಖ್ಯೆ: ಇಎನ್ 21 ವಿಎಸ್‌ಸಿ 2014 ದಿನಾಂಕ: 22.05.2014 ಮತ್ತು ತಿದ್ದುಪಡಿ ಸಂಖ್ಯೆ: ಇಎನ್ 49 ವಿಎಸ್‌ಸಿ 2016 ದಿನಾಂಕ: 12.01.2017ರಂತೆ ಸೌರ ನೀತಿ 2014-21ಅನ್ನು ಜಾರಿಗೊಳಿಸಿರುತ್ತದೆ. ಸದರಿ ನೀತಿಯನ್ವಯ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯು ಸೌರ ನೀತಿಯ ಅನುಷ್ಠಾನಕ್ಕೆ ನೇಮಿತ ಪ್ರತಿನಿಧಿಯಾಗಿರುತ್ತದೆ.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರು ಉಲ್ಲೇಖ ಪತ್ರದಂತೆ ಕೊಪ್ಪಳ ತಾಲ್ಲೂಕಿನಲ್ಲಿ 20ಮೆ.ವ್ಯಾ ಸಾಮರ್ಥ್ಯದ ಸೌರ ವಿದ್ಯುತ್ ಯೋಜನೆ ಸ್ಥಾಪಿಸಲು ಮೆ॥ ತಲೆತ್ತುತಾಯ್ ಸೋಲಾರ್ ಪ್ರಾಜೆಕ್ಟ್ಸ್ ಟು ಪ್ರೈ. ಲಿ., ರವರಿಗೆ ಕ್ರೆಡಲ್ ವತಿಯಿಂದ ದಿನಾಂಕ:08.02.2018ರಂದು ಹಂಚಿಕೆ ನೀಡಿದ್ದು, ಕೊಪ್ಪಳ ಜಿಲ್ಲೆ, ಕೊಪ್ಪಳ ತಾಲ್ಲೂಕು, ಕೇರೆಹಳ್ಳಿ ಗ್ರಾಮದಲ್ಲಿ 132-12-08 (ಎ-ಗು-ಆ) ವಿಸ್ತೀರ್ಣದ ಖಾಸಗಿ ಜಮೀನುಗಳನ್ನು ಕರ್ನಾಟಕ ಭೂ ಸುಧಾರಣಾ ಅಧಿನಿಯಮದನ್ವಯ ಶಾಸನಬದ್ಧ ಅನುಮೋದನೆಗಳ ನಂತರ ಕ್ರೆಡಲ್ ಸಂಸ್ಥೆಯು ಗುತ್ತಿಗೆ ಪಡೆದು ಸದರಿ ಜಮೀನುಗಳನ್ನು ಖಾಸಗಿ ಸೌರ ವಿದ್ಯುತ್ ಅಭಿವೃದ್ಧಿದಾರರಿಗೆ ನಿಯಮಾನುಸಾರ ಉಪಗುತ್ತಿಗೆ ನೀಡುವ ಸಂಬಂಧ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ: ಇಎನ್ 66 ವಿಎಸ್‌ಸಿ 2016 ದಿನಾಂಕ: 05.10.2016 ಮತ್ತು ಕರ್ನಾಟಕ ಭೂಕಂದಾಯ ಅಧಿನಿಯಮ (ತಿದ್ದುಪಡಿ), 2015 (ಕರ್ನಾಟಕ ಅಧಿನಿಯಮ 2015ರ ಸಂಖ್ಯೆ: 31)ರನ್ವಯ ಕೊಪ್ಪಳ ಜಿಲ್ಲೆ, ಕೊಪ್ಪಳ ತಾಲ್ಲೂಕು, ಕೇರೆಹಳ್ಳಿ ಗ್ರಾಮದಲ್ಲಿ ಅನುಬಂಧದಲ್ಲಿ ನಮೂದಿಸಿರುವ ಸರ್ವೆ ನಂಬರ್ ಹಾಗೂ ಭೂಮಾಲೀಕರ ಹೆಸರುಗಳನ್ನೊಳಗೊಂಡ 132-12-08 (ಎ-ಗು-ಆ) ವಿಸ್ತೀರ್ಣದ ಖಾಸಗಿ ಜಮೀನುಗಳಲ್ಲಿ, ಸೌರ ವಿದ್ಯುತ್ ಉತ್ಪಾದನಾ ಘಟಕಗಳನ್ನು ಅಳವಡಿಸುವ ಉದ್ದೇಶದಿಂದ, ಕರ್ನಾಟಕ ಭೂ ಸುಧಾರಣಾ ಅಧಿನಿಯಮದನ್ವಯ ಶಾಸನಬದ್ಧ

MD KREDL

GM (Tech) KREDL

ಅನುಮೋದನೆಗಳ ನಂತರ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯು ಗುತ್ತಿಗೆ ಆಧಾರದ ಮೇಲೆ ಜಮೀನುಗಳನ್ನು ಪಡೆದು ತರುವಾಯ ಜಮೀನುಗಳನ್ನು ಖಾಸಗಿ ಸೌರ ವಿದ್ಯುತ್ ಅಭಿವೃದ್ಧಿದಾರರಿಗೆ ನಿಯಮಾನುಸಾರ ಉಪಗುತ್ತಿಗೆಗೆ ನೀಡಲು ಸರ್ಕಾರ ಅನುಮತಿಸಿದೆ.

ಮುಂದುವರೆದು, ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಲ್ ಇವರು ಉಪಗುತ್ತಿಗೆ ನೀಡಲು ಪ್ರಸ್ತಾಪಿಸಿರುವ ಜಮೀನುಗಳ ಮಾಲೀಕತ್ವ/ವಾರಸುದಾರರು, ಸರ್ವೆನಂಬರ್, ಜಮೀನಿನ ವಿಸ್ತೀರ್ಣ ಇತ್ಯಾದಿ ದಾಖಲಾತಿಗಳನ್ನು ಪರಿಶೀಲಿಸಿ, ಖಾತರಿಪಡಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ವಿ.ಶ್ರೀನಿವಾಸಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ.

**ಇವರಿಗೆ,**

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿ, 50 ಪ್ರತಿಗಳನ್ನು ಇಂಧನ ಇಲಾಖೆ, ವಿಕಾಸಸೌಧ, ಇಲ್ಲಿಗೆ ಸರಬರಾಜು ಮಾಡತಕ್ಕದ್ದು.

**ಪ್ರತಿಗಳು:**

1. ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿ., ಕಾವೇರಿ ಭವನ, ಬೆಂಗಳೂರು-560 009.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ನಂ. 39, "ಶಾಂತಿ ಗೃಹ" ಪ್ಯಾಲೆಸ್ ರಸ್ತೆ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಬಿಲ್ಡಿಂಗ್, ಬೆಂಗಳೂರು.
4. ಜಿಲ್ಲಾಧಿಕಾರಿಗಳು, ಕೊಪ್ಪಳ ಜಿಲ್ಲೆ.
5. ಕಾರ್ಯದರ್ಶಿಗಳು, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ, ನಂ.16, ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತ ನಗರ, ಬೆಂಗಳೂರು-560052.
6. ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
7. ನಿರ್ದೇಶಕರು(ಆರ್ಥಿಕ), ಅಪರ ನಿರ್ದೇಶಕರು(ತಾಂತ್ರಿಕ ಮೇಲ್ವಿಚಾರಣೆ), ಜಂಟಿ ನಿದೇಶಕರು(ಎನ್.ಸಿ.ಇ. 2&3), ಜಂಟಿ ನಿರ್ದೇಶಕರು(ಯೋಜನೆ), ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
9. ಸರ್ಕಾರದ ಉಪ ಕಾರ್ಯದರ್ಶಿರವರ ಪತ್ರಾಂಕಿತ ಆಪ್ತ ಸಹಾಯಕರು, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
10. ಶಾಖೆ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

**ಸರ್ಕಾರದ ಅಧಿಸೂಚನೆ ಸಂಖ್ಯೆ: ಇಎನ್ 314 ವಿಎಸ್‌ಸಿ 2018 ದಿನಾಂಕ:17.12.2018ಕ್ಕೆ ಅನುಬಂಧ**

**ಹೋಬಳಿ–ಹಿಟ್ನಾಳ, ಗ್ರಾಮ: ಕೇರೆಹಳ್ಳಿ, ತಾಲ್ಲೂಕು–ಕೊಪ್ಪಳ, ಜಿಲ್ಲೆ–ಕೊಪ್ಪಳ.**

| ಕ್ರಮ ಸಂಖ್ಯೆ | ಸರ್ವೇ ನಂ | ಭೂ ಮಾಲೀಕರ ಹೆಸರು | ಒಟ್ಟು ವಿಸ್ತೀರ್ಣ (ಎ–ಗು–ಆ) | ಅ ಖರಾಬು | ಬ ಖರಾಬು | ಉಳಿಕೆ ಒಟ್ಟು ವಿಸ್ತೀರ್ಣ (ಎ–ಗು–ಆ) |
|---|---|---|---|---|---|---|
| 1 | 92/1 | ಮಹೇಶಪ್ಪ ರಾಮಚಂದ್ರಪ್ಪ ಹೂಗಾರ | 01-00 | - | - | 2-09 |
| | 92/5 | | 01-09 | - | - | |
| 2 | 92/2 | ಬಸಪ್ಪ ಬಿನ್ ಸಿದ್ದಪ್ಪ ಹೂಗಾರ | 01-00 | - | - | 4-31 |
| | 93/2 | | 02-18 | - | - | |
| | 94/3 | | 01-13 | - | - | |
| 3 | 92/3 | ಶೇಖರಪ್ಪ ಬಿನ್ ಸಿದ್ದಪ್ಪ ಹೂಗಾರ | 01-00 | - | - | 4-32 |
| | 93/3 | | 02-19 | - | - | |
| | 94/4 | | 01-13 | - | - | |
| 4 | 92/4 | ಮಹೇಶಪ್ಪ ಬಿನ್ ಸಿದ್ದಪ್ಪ ಹೂಗಾರ | 01-00 | - | - | 4-32 |
| | 93/4 | | 02-20 | 00-01 | - | |
| | 94/5 | | 01-13 | - | - | |
| 5 | 92/6 | ಸಿದ್ದಪ್ಪ ಹೂಗಾರ ಬಿನ್ ಭೀಮಪ್ಪ ಹೂಗಾರ | 04-00 | - | - | 04-00 |
| 6 | 92/7 | ಸರೋಜಮ್ಮ ಕೋಂ ಶಂಕರಪ್ಪ ಹೂಗಾರ | 01-19 | - | - | 01-19 |
| 7 | 93/1 | ವೀರೇಶ್ ಬಿನ್ ಸಿದ್ದಪ್ಪ ಹೂಗಾರ | 02-18 | - | - | 02-18 |
| 8 | 94/2 | ವೀರೇಶ್ ಬಿನ್ ಸಿದ್ದಪ್ಪ ಹೂಗಾರ | 1-13 | 00-01 | - | 01-13 |
| 9 | 94/1 | ಶಾಂತಮ್ಮ ಕೋಂ ಸಿದ್ದಪ್ಪ ಹೂಗಾರ | 02-00 | - | - | 02-00 |
| 10 | 95/2 | ಗೌರಮ್ಮ ಕೋಂ ವೀರಬಸಯ್ಯ ಹಿರೇಮಠ (ಜಂಟಿ) | 04-00 | - | - | 04-00 |
| | | ಮುದುಕಯ್ಯ ಹಿರೇಮಠ | | | | |
| | | ಪಂಚಾಕ್ಷರಯ್ಯ ಹಿರೇಮಠ | | | | |
| 11 | 96/2ಪಿ1 | ಭೀಮವ್ವ ಕೋಂ ದುರಗಪ್ಪ | 01-00 | - | - | 01-00 |
| 12 | 96/2ಪಿ1 | ವೀರೇಶ್ ಬಿನ್ ನಾಗಪ್ಪ ಶಿಳ್ಳಿಕ್ಯಾತರ | 01-04 | - | - | 01-04 |
| 13 | 96/2ಪಿ1 | ಶಿವಪ್ಪ ಬಿನ್ ಹನಮಪ್ಪ ಕುರಿ | 01-14 | - | - | 01-14 |
| 14 | 97/1 | ರಾಮಪ್ಪ ಬಿನ್ ಕರಿಭೀಮಪ್ಪ | 01-26-08 | - | - | 01-26-08 |
| 15 | 97/ಆ | ಭೀರಪ್ಪ ಬಿನ್ ಹನುಮಪ್ಪ ಕುರಿ | 02-08 | - | 00-02 | 04-14 |
| | | ಫಕೀರಪ್ಪ ಬಿನ್ ಹನುಮಪ್ಪ ಕುರಿ | 02-08 | | | |
| 16 | 98/3 | ರಾಮಣ್ಣ ಬಿನ್ ಹನಮಪ್ಪ ಕಟಗಿ | 01-04 | - | - | 01-04 |
| 17 | 98/ಎ/1 | ನಿಂಗಪ್ಪ ಬಿನ್ ಶಿವಪ್ಪ ಕರ್ಕಿಹಳ್ಳಿ | 03-00 | - | - | 03-00 |
| 18 | 98/ಎಪಿ1 | ಭೀಮಪ್ಪ ಬಿನ್ ಹನಮಪ್ಪ | 03-00 | - | - | 03-00 |
| 19 | 98/ಎಪಿ2 | ಗುಡದಪ್ಪ ಬಿನ್ ಶಿವಲಿಂಗಪ್ಪ | 03-35 | - | 00-07 | 03-28 |
| 20 | 98/ಬಿ | ಭೀಮಪ್ಪ ಸುವಾಳೆಪ್ಪ | 04-37 | - | 00-03 | 04-34 |
| 21 | 98/ಸಿ | ರಾಮಪ್ಪ ಬಿನ್ ಹನಮಪ್ಪ ಕುರಿ | 03-35 | - | 00-04 | 03-31 |
| 22 | 98/ಸಿ | ಭೀಮಪ್ಪ ಬಿನ್ ಹನಮಪ್ಪ ಕುರಿ | | | | |
| 23 | 99/1 | ವೀರೇಶ್ ಬಿನ್ ಹನಮಪ್ಪ ಸಂಗಾಪುರ | 02-00 | 00-02 | - | 01-38 |
| 24 | 99/3 | ಮೆಹಬೂಬಸಾಬ ಬಿನ್ ಹಸನಸಾಬ (ಜಂಟಿ) | 02-30 | - | 00-08 | 02-22 |
| | | ಎಮ್.ಹೆಚ್. ಕರ್ನೂಲ ಬಿನ್ ಹಸನಸಾಬ | | | | |
| | | ಜೈನಾಬೀ ಕೋಂ ಗುಲಾಮಸಾಬ | | | | |
| | | ಪೀರಮಾಬಿ ಕೋಂ ಶೌಕತ್ ಅಲಿ | | | | |
| | | ಅಮೀನಾ ಬೇಗಂ ಕೋಂ ಮೆಹಬೂಬ್‌ಸಾಬ್ | | | | |

| | | | | | | |
|---|---|---|---|---|---|---|
| 25 | 99/2 | ಮೆಹಬೂಬಸಾಬ ಬಿನ್ ಹಸನಸಾಬ ಅಗಳಕೇರ | 01-12 | - | - | -06 |
| | 99/4 | | 04-02 | - | 00-08 | |
| 26 | 100/1 | ಗವಿಸಿದ್ದಪ್ಪ ಬಿನ್ ನಿಂಗಪ್ಪ ಡೊಳ್ಳಿನ್ | 02-19 | - | - | 02-19 |
| 27 | 100/1 | ನಾಗವ್ವ ಕೋಂ ನಾಗಪ್ಪ ಮರಾಠಿ | 04-01 | - | - | 04-01 |
| 28 | 100/2 | ಮಂಜುನಾಥ ಬಿನ್ ಗವಿಸಿದ್ದಪ್ಪ ಕರ್ಕಿಹಳ್ಳಿ (ಜಂಟಿ) | 03-00 | - | - | 03-00 |
| | | ಶಿವರಾಜ ಕರ್ಕಿಹಳ್ಳಿ | | | | |
| 29 | 100/3 | ಬೆಟದಪ್ಪ ಬಿನ್ ಶಿವಪ್ಪ ಕರಿಕೆಹಳ್ಳಿ | 03-26 | - | 00-06 | 03-20 |
| 30 | 101/1 | ಹನಮಪ್ಪ ಬಿನ್ ನಿಂಗಪ್ಪ ಡೊಳ್ಳಿನ್ | 04-12 | 00-02 | - | 04-10 |
| 31 | 101/2 | ರಾಮಚಂದ್ರಪ್ಪ ಬಿನ್ ಸಣ್ಣ ವೀರಭದ್ರಪ್ಪ ಗುರಿಕಾರ (ಜಂಟಿ) | 07-00 | - | - | 07-00 |
| | | ಮಹೇಶ ಬಿನ್ ಸಣ್ಣ ವೀರಭದ್ರಪ್ಪ ಗುರಿಕಾರ | | | | |
| 32 | 87/ಎ | ಈಶಪ್ಪ ಬಿನ್ ಕನಕಪ್ಪ ಉಪ್ಪಾರ | 04-12 | - | - | 04-12 |
| 33 | 88/ಎ | ವೀರಣ್ಣ ಬಿನ್ ಹನುಮಂತಪ್ಪ ಹೂಗಾರ | 05-27 | 00-03 | - | 8-16 |
| | 88/ಸಿ | | 02-33 | 00-01 | - | |
| 34 | 88/ಸಿ | ಅಮರೇಶ ರಾಮಚಂದ್ರಪ್ಪ ಹೂಗಾರ (ಜಂಟಿ) | 05-27 | 00-03 | - | 05-24 |
| | 88/ಬಿ | ಮಹೇಶಪ್ಪ ಬಿನ್ ರಾಮಚಂದ್ರಪ್ಪ ಹೂಗಾರ | 02-34 | 00-01 | - | 02-33 |
| 35 | 89 | ಹುಲಿಗೆವ್ವ ಕೋಂ ಕೆಂಚಪ್ಪ ಅರಕೇರಿ (ಜಂಟಿ) | 05-07 | 00-01 | - | 05-06 |
| | | ವಿಜಯಲಕ್ಷ್ಮಿ ಬಿನ್ ಕೆಂಚಪ್ಪ ಅರಕೇರಿ | | | | |
| | | ಲೋಹಿತಕುಮಾರ ಬಿನ್ ಕೆಂಚಪ್ಪ ಅರಕೇರಿ | | | | |
| | | ಮಲ್ಲೇಶ್‌ಕುಮಾರ್ ಬಿನ್ ಕೆಂಚಪ್ಪ ಅರಕೇರಿ | | | | |
| 36 | 91/ಬಿ | ರುದ್ರಮ್ಮ ಕೋಂ ಸಂಜೀವಪ್ಪ | 03-29 | 00-01 | - | 3-28 |
| 37 | 91/ಸಿ | ಅನ್ನಪೂರ್ಣವ್ವ ಕೋಂ ಮಲ್ಲಿಯಪ್ಪ | 03-29 | - | - | 3-29 |
| 38 | 107/8 | ಅನ್ವರ್ ಅಲಿ ಬಿನ್ ರೋಷನ್ ಅಲಿ (ಜಂಟಿ) | 04-00 | - | - | 4-00 |
| | | ಮುಸ್ತಫಾ ಬಿನ್ ರೋಷನ್ ಅಲಿ | | | | |
| | | **ಒಟ್ಟು** | **133-26-08** | **00-16** | **00-38** | **132-12-08** |

(ಬಿ.ವಿ.ಶ್ರೀನಿವಾಸಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ.

17/12

ಕರ್ನಾಟಕ ಸರ್ಕಾರ

# ಜಿಲ್ಲಾಧಿಕಾರಿಗಳ ಕಾರ್ಯಾಲಯ ಕೊಪ್ಪಳ

ಸಂ/ಕಂದಾಯ/ಬಿನ್‌ಶೇತ್ಕಿ/2019 ದಿನಾಂಕ: 18-03-2019

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ,
#39, ಶಾಂತಿಗೃಹ" ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಕಟ್ಟಡ,
ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಕಛೇರಿ ಎದುರು,
ಬೆಂಘಳೂರು-01

– ಇವರಿಗೆ

ಮಾನ್ಯರೆ,

ವಿಷಯ:- ಮೆ॥ ತಲೆತ್ತುತಾಯಿ ಸೋಲಾರ್ ಪ್ರೋಜೆಕ್ಟ್ಸ್ ಟು ಪ್ರೈವೇಟ್ ಲಿಮಿಟೆಡ್, ಗುರಗಾಂವ್ ರವರು ಕೊಪ್ಪಳ ತಾಲೂಕಿನ ಕೆರೆಹಳ್ಳಿ ಗ್ರಾಮದಲ್ಲಿ ಉದ್ದೇಶಿತ ಸೌರ ವಿದ್ಯುತ್ ಘಟಕ ಸ್ಥಾಪಿಸಲು, ಖಾಸಗಿ ಭೂ ಮಾಲೀಕರಿಂದ ಜಮೀನುಗಳನ್ನು ಕ್ರೆಡೆಲ್ ಸಂಸ್ಥೆಯು ಗುತ್ತಿಗೆ ಪಡೆಯುವ ಸಲುವಾಗಿ ಪ್ರತಿ ಎಕರೆಗೆ ವಾರ್ಷಿಕ ಗುತ್ತಿಗೆ ಮೊತ್ತ ನಿಗದಿ ಕುರಿತು.

ಉಲ್ಲೇಖ:- ಮೆ॥ ತಲೆತ್ತುತಾಯಿ ಸೋಲಾರ್ ಪ್ರೋಜೆಕ್ಟ್ಸ್ ಟು ಪ್ರೈವೇಟ್ ಲಿಮಿಟೆಡ್, ಆಫೀಸ್-304, ಐಎಲ್‌ಡಿ, ಟ್ರೇಡ್ ಸೆಂಟರ, ಸೆಕ್ಟರ್-47 ಸೋಹ್ನಾ ರೋಡ್, ಗುರಗಾಂವ್-122001 ಇವರ ಅರ್ಜಿ ದಿನಾಂಕ 18-03-2019.

*******

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಮೂಲಕ ಮೆ॥ ತಲೆತ್ತುತಾಯಿ ಸೋಲಾರ್ ಪ್ರೋಜೆಕ್ಟ್ಸ್ ಟು ಪ್ರೈವೇಟ್ ಲಿಮಿಟೆಡ್, ಗುರಗಾಂವ್ ರವರು ಕೊಪ್ಪಳ ತಾಲೂಕಿನ ಕೆರೆಹಳ್ಳಿ ಗ್ರಾಮದಲ್ಲಿ ಉದ್ದೇಶಿತ ಸೌರ ವಿದ್ಯುತ್ ಘಟಕ ಸ್ಥಾಪಿಸಲು, ಖಾಸಗಿ ಭೂ ಮಾಲೀಕರಿಂದ ಕ್ರೆಡೆಲ್ ಸಂಸ್ಥೆಯು ಗುತ್ತಿಗೆ ಪಡೆಯುವ ಸಂಬಂಧ, ಸಂಬಂದಿಸಿದ ಭೂ ಮಾಲಿಕರುಗಳು ಹಾಗೂ ಸೌರಘಟಕ ಅಭಿವೃದ್ಧಿ ಸಂಸ್ಥೆಯಾದ ಮೆ॥ ತಲೆತ್ತುತಾಯಿ ಸೋಲಾರ್ ಪ್ರೋಜೆಕ್ಟ್ಸ್ ಟು ಪ್ರೈವೇಟ್ ಲಿಮಿಟೆಡ್, ಗುರಗಾಂವ್ ರವರು ಪ್ರತೀ ಎಕರೆಗೆ ವಾರ್ಷಿಕ ಗುತ್ತಿಗೆ ಮೊತ್ತ ರೂ, 25,000/- ಗಳು ಹಾಗೂ ಪ್ರತೀ ವರ್ಷದ ಅಂತ್ಯಕ್ಕೆ ವಾರ್ಷಿಕ ಗುತ್ತಿಗೆ ನೀಡಿದ ಮೊತ್ತಕ್ಕೆ ರೂ, 1,000/- ಗಳನ್ನು ಹೆಚ್ಚಿಸಲು ಸದರಿ ಕಂಪನಿಯವು ಭೂ ಮಾಲೀಕರೊಂದಿಗೆ ಕರಾರು ಒಪ್ಪಂದ ಮಾಡಿಕೊಂಡಿರುತ್ತಾರೆ. ಅದರಂತೆ ಸದರಿ ಕರಾರು ಒಪ್ಪಂದಕ್ಕೆ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡುವಂತೆ ಕೋರಿರುತ್ತಾರೆ.

ಪ್ರಯುಕ್ತ ಸದರಿ ಜಮೀನಿನ ಭೂ ಮಾಲೀಕರುಗಳು ಹಾಗೂ ಸೌರಘಟಕ ಅಭಿವೃದ್ಧಿ ಸಂಸ್ಥೆಯಾದ ಮೆ॥ ತಲೆತ್ತುತಾಯಿ ಸೋಲಾರ್ ಪ್ರೋಜೆಕ್ಟ್ಸ್ ಟು ಪ್ರೈವೇಟ್ ಲಿಮಿಟೆಡ್, ಗುರಗಾಂವ್‌ರವರ ಒಪ್ಪಂದದಂತೆ ಪ್ರತಿ ಎಕರೆಗೆ ವಾರ್ಷಿಕ ಗುತ್ತಿಗೆ ಮೊತ್ತ ರೂ, 25000/- ಹಾಗೂ ಪ್ರತಿ ವರ್ಷ ಅಂತ್ಯಕ್ಕೆ ವಾರ್ಷಿಕ ಗುತ್ತಿಗೆ ಮೊತ್ತಕ್ಕೆ ರೂ, 1000/- ಗಳನ್ನು ಹೆಚ್ಚಿಸಲು ಈ ಕಾರ್ಯಾಲಯದಿಂದ ಯಾವುದೇ ಅಭ್ಯಂತರ ಇರುವುದಿಲ್ಲವೆಂದು ದೃಢೀಕರಣ ನೀಡಲಾಗಿದೆ

ತಮ್ಮ ವಿಶ್ವಾಸಿ

ಜಿಲ್ಲಾಧಿಕಾರಿಗಳು,
ಕೊಪ್ಪಳ

ಪ್ರತಿಯನ್ನು: ಮೆ॥ ತಲೆತ್ತುತಾಯಿ ಸೋಲಾರ್ ಪ್ರೋಜೆಕ್ಟ್ಸ್ ಟು ಪ್ರೈವೇಟ್ ಲಿಮಿಟೆಡ್, ಆಫೀಸ್-304, ಐಎಲ್‌ಡಿ, ಟ್ರೇಡ್ ಸೆಂಟರ, ಸೆಕ್ಟರ್-47 ಸೋಹ್ನಾ ರೋಡ್, ಗುರಗಾಂವ್-122001 ಇವರ ಮಾಹಿತಿಗಾಗಿ ಕಳುಹಿಸಿದೆ.

Scanned with CamScanner